
# ಪತ್ರಿಕಾ ಲೇಖಕರ ನೀತಿಸಂಹಿತೆ

ಆನ್‌ಲೈನ್‌ನಲ್ಲಿ ಸದಾ ವ್ಯಸ್ತರಾಗಿರುವ ನಮ್ಮ ಕೆಲವು ಲೇಖಕರಿಗೆ ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ಬರಹವನ್ನು ತಕ್ಷಣ ಫೇಸ್‌ಬುಕ್, ವಾಟ್ಸ್‌ಆ್ಯಪ್, ಟ್ವಿಟರ್‌ನಲ್ಲಿ ಹಂಚಿಕೊಳ್ಳುವ ಅವಸರ. ಅವರ ಬರಹ ಸಾಮಾಜಿಕ ಜಾಲತಾಣದ ಗೋಡೆಯೊಂದರಲ್ಲಿ ನೇತಾಡಿ, ಅದಕ್ಕೆ ಒಂದಷ್ಟು ಲೈಕ್‌ಗಳು, ಅಭಿಪ್ರಾಯಗಳು ಬಂದರೆ ಮಾತ್ರ ಅವತ್ತಿನ ನಿದ್ದೆ ಅವರ ಕಣ್ಣಿಗೆ ಹತ್ತುತ್ತದೆ. ಇವರಲ್ಲಿ ಅತಿ ಉತ್ಸಾಹದ ಲೇಖಕರು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಾರೆ. ತಮ್ಮ ಬರಹ ಇರುವ ಪತ್ರಿಕೆ ಮಾರುಕಟ್ಟೆಗೆ ಬರುತ್ತಿದ್ದಂತೆಯೇ, ಆನ್‌ಲೈನ್‌ನಲ್ಲಿ ತಡಮಾಡದೇ ಪ್ರಕಟಿಸುತ್ತಾರೆ; ಓದುವಂತೆ ತಮ್ಮ ಹಿಂಬಾಲಕರನ್ನು, ಮಿತ್ರರನ್ನು ಕೇಳಿಕೊಳ್ಳುತ್ತಾರೆ. ಪ್ರಕಟಿತ ಪತ್ರಿಕೆಯ ಪ್ರತಿಯ ಹಂಗಿಲ್ಲದೇ ಓದುಗರು ಪೂರ್ತಿಯಾಗಿ ಓದಿಕೊಳ್ಳುವಂತೆ ಇಡೀ ಬರಹದ ಫೋಟೊ ಪ್ರತಿಗಳು ಅಲ್ಲಿರುತ್ತವೆ.

ಹಾಗೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿತ ಬರಹವನ್ನು ತಕ್ಷಣಕ್ಕೆ ಹಾಕುವುದು ಅನೈತಿಕ ಮಾತ್ರವಲ್ಲ, ತಮ್ಮ ಬರಹವನ್ನು ಪ್ರಕಟಿಸಿದ ಪತ್ರಿಕೆಗೆ ಲೇಖಕ ಮಾಡುವ ಅಪಚಾರ ಕೂಡ. ಇದು ಪತ್ರಿಕೆಯ ಮೂಲಭೂತ ಉದ್ದೇಶವನ್ನೇ ಹಾಳುಗೆಡವಿದಂತೆ; ಗೇಲಿ ಮಾಡಿದಂತೆ. ವಿಶೇಷ ಎಂದರೆ ತಮ್ಮ ಬರಹದ ಪ್ರಕಟಿತ ಪುಟಗಳನ್ನು ಹಂಚಿಕೊಳ್ಳುವುದಕ್ಕೆ ಮಾತ್ರ ಲೇಖಕರ ಈ ಚಟುವಟಿಕೆ ಸೀಮಿತವಾಗಿರುತ್ತದೆ. ಪತ್ರಿಕೆಯ ಇನ್ನಿತರ ಬರಹಗಳು ಮತ್ತು ಅದರ ಒಟ್ಟಂದದ ಬಗ್ಗೆ ಅವರು ತಪ್ಪಿಯೂ ಸೊಲ್ಲೆತ್ತುವುದಿಲ್ಲ. ಒಂದು ಪತ್ರಿಕೆ ಎಂದರೆ ಹತ್ತಾರು ಕ್ರಿಯಾಶೀಲರ ಸಾಮೂಹಿಕ ಭಾಗವಹಿಸುವಿಕೆ. ಅಲ್ಲಿ ಹಲವು ಬಗೆಯ ದನಿಗಳನ್ನು ಕೇಳುವುದು, ಬಣ್ಣಗಳನ್ನು ಒಂದೇ ಕಡೆ ನೋಡುವುದು ವಿಶಿಷ್ಟ ಅನುಭವವನ್ನು ಕೊಡುತ್ತದೆ. ಈ ಸ್ವರಮೇಳದ ಇಂಪು ಏಕಾಂಗಿ ವೀರನಂತೆ ಕ್ಷಣಭಂಗುರವಾದ, ದಾರಿ ತಪ್ಪಿಸುವ ಕಾಡಿನಂತಿರುವ ಫೇಸ್‌ಬುಕ್‌ನಲ್ಲಿ ಪ್ರದರ್ಶನಗೊಳ್ಳುವುದರಲ್ಲಿ ಇರುವುದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಲೇಬಾರದು ಎಂದಲ್ಲ; ಓದಲು ಪ್ರೇರೇಪಿಸುವಂತೆ ತಮ್ಮ ಬರಹದ ಕುರಿತು ಮಾಹಿತಿ ಕೊಟ್ಟರೆ ಅದು ಓದುಗರನ್ನು ಸಂಚಿಕೆಯೆಡೆಗೆ ಸೆಳೆದೀತು. ಅಥವಾ ಸಂಚಿಕೆ ಮಾರುಕಟ್ಟೆಗೆ ಬಂದ ನಂತರದ ಒಂದು ನಿರ್ದಿಷ್ಟ ಕಾಲಾವಧಿಯ ಅಂತರವನ್ನಾದರೂ ಕಾಯ್ದುಕೊಂಡರೆ ಒಳಿತು. ಪತ್ರಿಕಾ ಪ್ರಕಟಣೆಗೆ ಸಂಬಂಧಿಸಿದಂತೆ ಲೇಖಕರಿಗೆ ಅವರದ್ದೇ ಆದ ಜವಾಬ್ದಾರಿ, ನೀತಿಸಂಹಿತೆ ಇರಬೇಕಾಗುತ್ತದೆ. ಕೆಲವು ಪ್ರಾಮಾಣಿಕ ಓದುಗರೂ ತಕ್ಷಣಕ್ಕೆ ಹಂಚಿಕೊಳ್ಳುವ ಅಮಿತ ಉತ್ಸಾಹಕ್ಕೆ ಈ ನಿಟ್ಟಿನ ಸಾಮೂಹಿಕ ಶಿಸ್ತನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯ ಈಗ ಇದೆ. ಓದುಗ, ಲೇಖಕ ಮತ್ತು ಪತ್ರಿಕೆ ಈ ಘನವಾದ ಸಂಬಂಧ ಆನ್‌ಲೈನ್ ಪೈರಸಿಯಿಂದ ಕೆಡದೆ ಉಳಿದು ಬೆಳೆಯಲಿ ಎಂಬುದು ನಮ್ಮ ಹಾರೈಕೆ, ಬಿನ್ನಹ.



ಕಲೆ: ವೆಂಕಟ್ರಮಣ ಭಟ್

ಕಲಾವಿದ, ಲೇಖಕ ಕೆ.ವಿ. ಸುಬ್ರಹ್ಮಣ್ಯಂ ಅವರ ವಿಶೇಷ ಸಂದರ್ಶನ, ಚೇತೋಹಾರಿ ಪ್ರಬಂಧ ಮತ್ತು ಕತೆಗಳು ಈ ಸಂಚಿಕೆಯಲ್ಲಿವೆ.

**ಸಂದೀಪ ನಾಯಕ**